**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ರವರ ನ್ಯಾಯಾಲಯ,**

**ಕಡೂರು**

**ಸಿ.ಸಿ.ನಂ.3340/2023**

**ದಿನಾಂಕಃ 19.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

ಪಿ.ಡಬ್ಲ್ಯುಃ 1 ಸಿ.ಡಬ್ಲ್ಯುಃ 1

ಸಾಕ್ಷಿಯ ಹೆಸರು : ವಸಂತರಾಮಾಚಾರ್

ತಂದೆಯ ಹೆಸರು : ರಾಮಾಚಾರ್

ವಯಸ್ಸು : 59 ವರ್ಷ

ಉದ್ಯೋಗ : ಪಿ.ಐ. ಕರಾವಳಿ ಕಾವಲು ಪೊಲೀಸ್ ಠಾಣೆ

ವಾಸ : ಗಂಗೊಳ್ಳಿ, ಉಡುಪಿ ಜಿಲ್ಲೆ

**ಮುಖ್ಯ ವಿಚಾರಣೆಃ ಸ ಸ ಅ ರವರಿಂದಃ**

ದಿಃ 03.02.2023 ರಿಂದ 08.06.2023 ರವರೆಗು ಕಡೂರು ವೃತ್ತದಲ್ಲಿ ಸಿಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 09.05.2023 ರಂದು, ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ಇಲಾಖಾ ಜೀಪಿನಲ್ಲಿ ನನ್ನ ಸಿಬ್ಬಂದಿಗಳಾದ ಚಾಸಾ-5 ಮತ್ತು 8 ರವರೊಂದಿಗೆ ವಿಧಾನಸಭಾ ಚುನಾವಣಾ ಗಸ್ತಿನಲ್ಲಿರುವಾಗ ಅದೇ ಸಮಯದಲ್ಲಿ ನಮ್ಮೊಂದಿಗೆ ಚಾಸಾ-4 ಮತ್ತು 7 ರವರು ಅವರ ಇಲಾಖಾ ಜೀಪಿನಲ್ಲಿ ನಮ್ಮ ಜೊತೆ ಗಸ್ತಿನಲ್ಲಿ ಇದ್ದಾಗ ಕಡೂರು ನಗರದ ಬಿ.ಎಂ.ಶ್ಯಾಮ್ ರಾವ್ ರಸ್ತೆಯ ಮುಂದೆ ಅಪ್ಪು ಕಬಾಬ್ ಸೆಂಟರ್ ನ ಮುಂದೆ ಇರುವ ಸಾರ್ವಜನಿಕ ಸ್ಥಳದಲ್ಲಿ ಯಾರೋ ಒಬ್ಬ ಆಸಾಮಿಯು ಅಕ್ರಮವಾಗಿ ಮದ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರುವುದಾಗಿ ಬಾತ್ಮಿದಾರರಿಂದ ಖಚಿತ ಮಾಹಿತಿ ಬಂದ ಆಧಾರದ ಮೇರೆಗೆ ಮಧ್ಯಾಹ್ನ 2.45 ಗಂಟೆ ಸುಮಾರಿಗೆ ಘಟನಾ ಸ್ಥಳಕ್ಕೆ ಹೋಗಿ ಮರೆಯಲ್ಲಿ ನಿಂತು ನೋಡಲಾಗಿ ಯಾರೋ ಒಬ್ಬ ಆಸಾಮಿಯು ಪ್ಲಾಸ್ಟಿಕ್ ಚೀಲದಲ್ಲಿ ಮದ್ಯವನ್ನು ಮಾರಾಟ ಮಾಡುತ್ತಿರುವುದನ್ನು ನೋಡಿರುತ್ತೇವೆ. ಅದೇ ಸಮಯದಲ್ಲಿ ನಾನು ಆರೋಪಿಯನ್ನು ಶೋಧನೆ ನಡೆಸಲು ಶೋಧನಾ ಸಮುಚ್ಚಿತ್ತ ಆಧಾರವನ್ನು

This is a True Copy of the Court Records Online. Authenticated @ districts.ecourtsindia.com/cnr/KACM210048832023/truecopy/order-2.pdf

ಪಡೆಯುವಷ್ಟರಲ್ಲಿ ಆರೋಪಿಯು ಮದ್ಯವನ್ನು ಮರೆಮಾಚಿ ತಲೆಮರೆಸಿಕೊಳ್ಳಬಹುದೆಂದು ನನ್ನ ಮೇಲಾಧಿಕಾರಿಯಿಂದ ಮೌಖಿಕವಾಗಿ ಆದೇಶವನ್ನು ಪಡೆದು ಅಲ್ಲೇ ದಾರಿಯಲ್ಲಿ ಇದ್ದ ಇಬ್ಬರು ವ್ಯಕ್ತಿಗಳನ್ನು ಪರಿಚಯ ಮಾಡಿಕೊಂಡು ಸದರಿ ದಾಳಿಯ ವಿಚಾರವನ್ನು ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡಿದ್ದು, ಸದರಿಯವರು ಒಪ್ಪಿದ ಮೇರೆಗೆ ನಾನು ಪಂಚರಿಗೆ ನೋಟೀಸನ್ನು ಜಾರಿ ಮಾಡಿರುತ್ತಾರೆ. ಸಾಕ್ಷಿಯು ನೋಟೀಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು.

ನಂತರ ಪಂಚರ ಸಮಕ್ಷಮ ನಮ್ಮ ಅಂಗಶೋಧನೆಯನ್ನು ಮಾಡಿಕೊಂಡು, ನಮ್ಮ ಇಲಾಖಾ ವಾಹನವನ್ನು ಶೋಧನೆ ನಡೆಸಿ ಯಾವುದೇ ಮದ್ಯದ ಪೌಚುಗಳು ಇರುವುದಿಲ್ಲವೆಂದು ಖಚಿತಪಡಿಸಿಕೊಂಡು, ಪಂಚರ ಸಮಕ್ಷಮ ಆಸಾಮಿಯನ್ನು ದಾಳಿ ಮಾಡಿದಾಗ ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ನೋಡಿ ಓಡಿಹೋಗಲು ಪ್ರಯತ್ನಿಸಿರುತ್ತಾರೆ. ನಂತರ ನಾನು ಮತ್ತು ಇಲಾಖಾ ಸಿಬ್ಬಂದಿಗಳು ಆತನನ್ನು ಹಿಡಿದು ಹೆಸರು ವಿಳಾಸ ಕೇಳಲಾಗಿ ಆತನು ತನ್ನ ಹೆಸರು ಮಂಜುನಾಥ ಬಿನ್ ಕರಿಯನಾಯ್ಕು, ಮಚ್ಚೇರಿಕೋಡಿ ಹಳ್ಳಿ ಎಂದು ತಿಳಿಸಿದ್ದು, ಸ್ವಂತ ಊರು ದೇವರಹಳ್ಳಿ, ಸಿಂಗಟಗೆರೆ ಎಂದು ತಿಳಿರುತ್ತಾರೆ. ಆತನ ತನ್ನ ಬಳಿ ಇದ್ದ ಬಿಳಿ ಬಣ್ಣದ ಚೀಲದ ಬಗ್ಗೆ ವಿಚಾರಿಸಲಾಗಿ, ಆತ ಸದರಿ ಚೀಲದಲ್ಲಿ 90 ಎಂ ಎಲ್.ನ 274 ಮದ್ಯ ತುಂಬಿದ ರಾಜಾವಿಸ್ಕಿಗಳನ್ನು ಮಾರಾಟ ಮಾಡಲು ತಂದಿರುವುದಾಗಿ ತಿಳಿಸಿರುತ್ತಾರೆ. ಸದರಿ ಮದ್ಯವನ್ನು ಮಾರಾಟ ಮಾಡಲು ತನ್ನ ಬಳಿ ಪರವಾನಿಗೆ ಇದೆಯೇ ಎಂದು ಕೇಳಲಾಗಿ, ತನ್ನ ಬಳಿ ಪರವಾನಿಗೆ ಇರುವುದಿಲ್ಲ, ಹೆಚ್ಚಿನ ಬೆಲೆ ಮಾರಾಟ ಮಾಡಲು ತಂದಿರುವುದಾಗಿ ತಿಳಿಸಿರುತ್ತಾರೆ. ಸದರಿ ಮದ್ಯವನ್ನು ಅಕ್ರಮವಾಗಿ ಮಾರಾಟ ಮಾಡಲು ತಂದಿರುವುದು ಕಂಡುಬಂದಿದುದ್ದರಿಂದ ಪಂಚರಾದ ಚಾಸಾ-2 ಮತ್ತು 3 ರವರು ಸದರಿ ಮದ್ಯದ ಪೌಚುಗಳನ್ನು ಸುಮಾರು ರೂ.9,425/- ಬೆಲೆ-ಬಾಳುತ್ತದೆ ಎಂದು ಅಂದಾಜಿಸಿರುತ್ತಾರೆ ಮತ್ತು ಆತನ ಬಳಿ ಇದ್ದ ಚೀಲವನ್ನು ಪರಿಶೀಲಿಸಿ ನೋಡಲಾಗಿ, ಮದ್ಯದ ಜೊತೆಗೆ ಒಂದು ಬಿಳಿ ಕವರಿನಲ್ಲಿ ಹಣವಿದ್ದು, ಸದರಿ ಹಣದ ಬಗ್ಗೆ ವಿಚಾರಿಸಲಾಗಿ, ಸದರಿ ಹಣವು ಮದ್ಯ ಮಾರಾಟದಿಂದ ಬಂದ ಹಣವಾಗಿರುತ್ತದೆ ಎಂದು ತಿಳಿಸಿರುತ್ತಾನೆ. ಸದರಿ ಹಣವನ್ನು ಎಣಿಸಿ ನೋಡಲಾಗಿ

This is a True Copy of the Court Records Online. Authenticated @ districts.ecourtsindia.com/cnr/KACM210048832023/truecopy/order-2.pdf

ರೂ.12,740/– ಇರುವುದು ಕಂಡುಬಂದಿರುತ್ತದೆ. ಆರೋಪಿಯ ವಿರುದ್ಧ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದರ ಬಗ್ಗೆ ಸ್ಥಳದಲ್ಲಿಯೇ ನಮ್ಮ ಲ್ಯಾಪ್‌ಟ್ಯಾಪ್ ಸಹಾಯದಿಂದ ವರದಿಯನ್ನು ಮಧ್ಯಾಹ್ನ 3.30 ಗಂಟೆಯಿಂದ 4.00 ಗಂಟೆಯವರೆಗು ವರದಿಯನ್ನು ಚಾಸಾ–5 ರವರ ಬಳಿ ತಯಾರಿಸಿ ಚಾಸಾ–7 ರವರ ಮೂಲಕ ಠಾಣಾ ಎಸ್,ಹೆಚ್.ಓ ರವರಿಗೆ ನೀಡಿ ಪ್ರಕರಣವನ್ನು ದಾಖಲಿಸಿಕೊಂಡು ಬರುವಂತೆ ನಾನು ಕಳುಹಿಸಿಕೊಟ್ಟಿರುತ್ತಾರೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಪಿ.2 ಎ ಎಂದು ಗುರುತಿಸಲಾಯಿತು.

ನಂತರ ಚಾಸಾ–7 ರವರು ಠಾಣೆಯಲ್ಲಿದ್ದ ಎಸ್,ಹೆಚ್.ಓ.ರವರಿಗೆ ವರದಿಯನ್ನು ತೆಗೆದುಕೊಂಡು ಹೋಗಿ ನೀಡಿದ್ದು, ಸದರಿಯವರು ವರದಿಯನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 128/2023 ರಂತೆ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ಸದರಿ ಪ್ರ.ವ.ವ. ದಾಖಲಾದ ಬಗ್ಗೆ ಎಸಿ.ಹೆಚ್.ಓ.ರವರಾದ ಚಾಸಾ–12 ರವರು ನನಗೆ ಫೋನ್ ಮೂಲಕ ತಿಳಿಸಿದ್ದರಿಂದ ಪಂಚರ ಸಮಕ್ಷಮ ಆಸಾಮಿ ಬಳಿ ಇದ್ದ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಮತ್ತು ಅದರೊಳಗಿದ್ದ 90 ಎಂ.ಎಲ್.ನ 274 ಮದ್ಯ ತುಂಬಿದ ರಾಜಾವಿಸ್ಕಿ ಎಂದು ಬರೆದಿರುವ ಮದ್ಯದ ಸ್ಯಾಚೇಟ್ ಗಳು ಪಂಚರ ಸಮಕ್ಷಮ ವಶಪಡಿಸಿಕೊಂಡು ಸಂಜೆ 4.15 ಗಂಟೆಯಿಂದ 6.00 ಗಂಟೆಯವರೆಗು ಮಹಜರು ಕ್ರಮ ಜರುಗಿಸಿ, ಛಾಯಾಚಿತ್ರವನ್ನು ತೆಗೆಸಿ, ವಶಪಡಿಸಿಕೊಂಡ ಮದ್ಯದ ಪೌಚುಗಳನ್ನು ಅದೇ ಚೀಲದಲ್ಲಿ ಹಾಕಿ ಬಾಯಿಯನ್ನು ಹೊಲೆದು 'ಪಿ' ಎಂಬ ಅಕ್ಷರದಿಂದ ಸೀಲು ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇವೆ. ನಂತರ ಆಸಾಮಿ ಬಳಿ ಇದ್ದ ಅಕ್ರಮ ಮದ್ಯದ ಮಾರಾಟದಿಂದ ಬಂದಂತಹ ರೂ.12,740/–ಹಣವನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡು ಪ್ಲಾಸ್ಟಿಕ್ ಕವರಿನಲ್ಲಿ ಹಾಕಿ ಸೀಲು ಮಾಡಲಾಗಿರುತ್ತದೆ. ಸದರಿ ಚೀಲದ ಮೇಲೆ ನನ್ನ ಹಾಗೂ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಲಾಗಿರುತ್ತಾರೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.3 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಪಿ.3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.4 ಮತ್ತು 5 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಬಿಳಿ ಬಣ್ಣದ

This is a True Copy of the Court Records Online. Authenticated @ districts.ecourtsindia.com/cnr/KACM210048832023/truecopy/order-2.pdf

ಪ್ಲಾಸ್ಟಿಕ್ ಚೀಲ ಮತ್ತು ಅದರೊಳಗಿರುವ ಖಾಲಿ ಮದ್ಯದ ಪೌಚುಗಳನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ–1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ಮು.ಮಾ–1 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ರೂ.12,740/– ನಗದು ಹಣವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ–2 ಎಂದು ಗುರುತಿಸಲಾಯಿತು. ನಂತರ ವಶಪಡಿಸಿಕೊಂಡ ಮುದ್ದೆಮಾಲಿನೊಂದಿಗೆ ಆರೋಪಿಯನ್ನು ಠಾಣೆಯ ಠಾಣಾಧಿಕಾರಿಯ ಮುಂದೆ ಹಾಜರುಪಡಿಸಿರುತ್ತೇನೆ. ಆರೋಪಿಯು ನ್ಯಾಯಾಲಯದಲ್ಲಿ ಈ ದಿನ ಗೈರು ಹಾಜರಿದ್ದು, ಆರೋಪಿಯ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ತಮ್ಮ ಪರ ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಸಿ.ಎನ್. ವಕೀಲರಿಂದಃ**

ನಿಪಿ.2 ರ ವರದಿಯನ್ನು ಚಾಸಾ–5 ರವರ ಹಸ್ತ ತಯಾರಿಸಿರುತ್ತೇನೆ. ಚಾಸಾ–5 ರವರು ವರದಿಯನ್ನು ತಯಾರಿಸಿದ ನಂತರ ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ.3 ರ ಪಂಚನಾಮೆಯನ್ನು ಸಹ ಚಾಸಾ–5 ರವರೇ ತಯಾರಿಸಿರುತ್ತಾರೆ. ಚಾಸಾ–5 ರವರು ದಾಳಿ ಮಾಡಿದ ಸಂದರ್ಭದಿಂದ ಮಹಜರು ಕ್ರಮ ಜರುಗಿಸುವವರೆಗು ಎಲ್ಲಿಯೂ ಹೋಗಿರಲಿಲ್ಲ, ನನ್ನೊಂದಿಗೆ ಇದ್ದರು. ಚಾಸಾ–7 ರವರು ಠಾಣೆಗೆ ವರದಿಯನ್ನು ತೆಗೆದುಕೊಂಡು ಹೋಗಿರುತ್ತಾರೆ. ನನ್ನ ವರದಿಯಲ್ಲಿ ಠಾಣೆಗೆ ಹೋದವರು ಚಾಸಾ–5 ರವರು ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ತಪ್ಪಾಗಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ಚಾಸಾ–7 ರವರು ವರದಿಯನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ, ಆದರೆ ಚಾಸಾ–5 ರವರು ಎಂದು ತಪ್ಪಾಗಿ ನಮೂದಾಗಿರುತ್ತದೆ. ಅದೇ ರೀತಿ ನಮ್ಮ ಠಾಣಾ ದಿನಚರಿಯಲ್ಲಿಯೂ ವರದಿಯನ್ನು ಠಾಣೆಗೆ ತೆಗೆದುಕೊಂಡು ಹೋಗಿ ಕೊಟ್ಟ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ.

ನಮ್ಮ ಇಲಾಖಾ ಜೀಪಿನ ಸಂಖ್ಯೆ–ಕೆಎ–18/ಜಿ–1246 ಆಗಿರುತ್ತದೆ. ನಾನು ಸದರಿ ವಾಹನದಲ್ಲಿ ಹೋಗಿ ದಾಳಿ ನಡೆಸಿರುತ್ತೇನೆ. ಸದರಿ ದಿನದಂದು ನಾವು ಎಲ್ಲರು ಸಮವಸ್ತ್ರದಲ್ಲಿ ಇದ್ದೆವು. ನಮ್ಮ ಇಲಾಖಾ ವಾಹನದ ಚಾಲಕ ಚಾಸಾ–8 ರವರು ಇದ್ದರು. ಚಾಸಾ–4 ರವರ ಜೀಪಿನಲ್ಲಿ ಚಾಲಕನಾಗಿ ಚಾಸಾ–7 ರವರು ಇದ್ದರು. ಚಾಸಾ–4 ರವರೊಂದಿಗೆ ಚಾಸಾ–

This is a True Copy of the Court Records Online. Authenticated @ districts.ecourtsindia.com/cnr/KACM210048832023/truecopy/order-2.pdf

6 ರವರು ಇಲಾಖಾ ಜೀಪಿನಲ್ಲಿ ಇದ್ದರು. ನಾನು ಮಾಹಿತಿ ಬಂದಾಗ ಕಡೂರಿನಲ್ಲಿ ಗಸ್ತಿನಲ್ಲಿ ಇದ್ದೆ. ನಾನು ಘಟನಾ ಸ್ಥಳಕ್ಕೆ ಹೋದಾಗ ಸುಮಾರು ಮಧ್ಯಾಹ್ನ 2.45 ಗಂಟೆ ಸಮಯವಾಗಿತ್ತು. ನನಗೆ ಮಾಹಿತಿ ಬಂದ ತಕ್ಷಣ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಪಂಚರಿಗೆ ನಾನು ನೋಟೀಸನ್ನು ನೀಡಿದಾಗ ಸುಮಾರು ಮಧ್ಯಾಹ್ನ 3.10 ರ ಸಮಯವಾಗಿತ್ತು. ಘಟನಾ ಸ್ಥಳವು ಸಾರ್ವಜನಿಕ ಸ್ಥಳವಾಗಿದ್ದರಿಂದ ನಾನು ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಘಟನಾ ಸ್ಥಳದಲ್ಲಿ ಮನೆಗಳು, ಅಂಗಡಿಗಳು ಇದ್ದವು ಎಂದರೆ ಸರಿ. ಸದರಿ ಅಂಗಡಿ ಮತ್ತು ಮನೆಗಳ ಜನರನ್ನು ನಾನು ಸಾಕ್ಷಿದಾರರಾಗಿ ಮಾಡಿರುವುದಿಲ್ಲ.

ಆರೋಪಿಯು ಯಾವುದೇ ಮದ್ಯವನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ.3 ರ ಮಹಜರಿನಲ್ಲಿ ಬರೆದಿರುವ ಮದ್ಯದ ಪೌಚುಗಳ ಸಿರಿಯಲ್ ನಂಬರು ಮತ್ತು ಬ್ಯಾಚ್ ನಂಬರುಗಳನ್ನು ನನಗೆ ಈಗ ಹೇಳಲು ಆಗುವುದಿಲ್ಲ. ಅದೇ ರೀತಿ ನಾನು ವಶಪಡಿಸಿಕೊಂಡಿದ್ದೇನೆ ಎಂದು ಹೇಳುವ ಮದ್ಯದ ತಯಾರಿಕಾ ದಿನಾಂಕಗಳನ್ನು ಮತ್ತು ಅಂತ್ಯದ ದಿನಾಂಕಗಳನ್ನು ನನಗೆ ಈಗ ಹೇಳಲು ಆಗುವುದಿಲ್ಲ. ನಾನು ವಶಪಡಿಸಿಕೊಂಡಿದ್ದೇನೆ ಎಂದು ಹೇಳುವ ಮದ್ಯದ ಪೌಚುಗಳನ್ನು ಯಾವ ಕಂಪನಿ ತಯಾರಿಸಿರುತ್ತದೆ ಎಂದು ನಾನು ನೋಡಿಲ್ಲ. ನಾನು ವಶಪಡಿಸಿಕೊಂಡ ಹಣ ಸುಮಾರು ರೂ.12,740/- ಆಗಿದ್ದು, ಅದರಲ್ಲಿ ರೂ.500/- 16 ನೋಟುಗಳು, ರೂ.200/- 02 ನೋಟುಗಳು, ರೂ.100/- 29 ನೋಟುಗಳು, ರೂ.50/- 8 ನೋಟುಗಳು, ರೂ.20/- 38 ನೋಟುಗಳು, ರೂ.10/- 28 ನೋಟುಗಳು ಒಟ್ಟು ರೂ.12,740/- ಹಣವನ್ನು ಆರೋಪಿಯಿಂದ ವಶಪಡಿಸಿಕೊಂಡಿರುತ್ತೇನೆ. ನಿಪಿ.3 ರ ಮಹಜರಿನಲ್ಲಿ ನಾನು ವಶಪಡಿಸಿಕೊಂಡ ಹಣದ ನೋಟಿನ ನಂಬರುಗಳನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಹಣವನ್ನು ವಶಪಡಿಸಿಕೊಂಡು ಅದರ ಮೇಲೆ ಪಂಚರ ಹಾಗೂ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಲಾಗಿರುವುದಿಲ್ಲ ಎಂದರೆ ಸರಿ.

ನ್ಯಾಯಾಲಯದ ಮುಂದೆ ಇರುವ ಮು.ಮಾ.-1 ರಂತಹ ಮದ್ಯದ ಪೌಚುಗಳು ಎಲ್ಲಾ ಮದ್ಯದ ಅಂಗಡಿಗಳಲ್ಲಿಯೂ ಸಿಗುತ್ತದೆ ಎಂದರೆ ಸರಿ. ಆರೋಪಿಯು ಸದರಿ ದಿನದಂದು ಯಾವುದೇ ಮದ್ಯವನ್ನು ಮಾರಾಟ ಮಾಡುತ್ತಿರಲಿಲ್ಲ, ಆದರೂ ಸಹ

This is a True Copy of the Court Records Online. Authenticated @ districts.ecourtsindia.com/cnr/KACM210048832023/truecopy/order-2.pdf

ಆರೋಪಿಯ ವಿರುದ್ಧ ನಮ್ಮ ಠಾಣಾ ಅಂಕಿ–ಅಂಶಗಳಿಗೊಸ್ಕರ ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.4 ರ ಛಾಯಾಚಿತ್ರದಲ್ಲಿ ನೀಲಿ ಬಣ್ಣದ ಟೀ–ಶರ್ಟ್ ಹಾಕಿ ಮಧ್ಯ ಭಾಗದಲ್ಲಿ ನಿಂತಿರುವ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಮಹಜರು ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.4 ಮತ್ತು 5 ರ ಛಾಯಾಚಿತ್ರಗಳನ್ನು ಈ ಪ್ರಕರಣಕೊಸ್ಕರ ಸೃಷ್ಠಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಇರುವ ಮು.ಮಾ–2 ರ ಹಣವನ್ನು ಈ ಪ್ರಕರಣಕೊಸ್ಕರ ಸೃಷ್ಠಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಗೂ, ಮು.ಮಾ–1 ಮತ್ತು 2 ಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

**sd/-**

(ಸವಿತರಾಣಿ ಹೆಚ್.ವಿ.)
C/c. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು ಕಡೂರು.

This is a True Copy of the Court Records Online. Authenticated @ districts.ecourtsindia.com/cnr/KACM210048832023/truecopy/order-2.pdf